ಬೆಚ್ಚಿ ಮೊದಲು ಒಂದು ಗ್ಲಾಸಿನಲ್ಲಿ ನೀರು ಸುರಿದುಕೊಂಡು, ಒಂದು ಕ್ಷಣ ತಡೆದು ನಂತರ ಮುಂದುವರೆಸಿದಳು.

“ಟೆಡಿಯ ಕೆಲಸ ಎರಡು ತಿಂಗಳಿಂದ ಸುಸೂತ್ರವಾಗಿ ನಡೆಯುತ್ತಿಲ್ಲ. ಕಳೆದ ವರ್ಷ ಪೂರ್ತಿಯಾಗಿ ಮನೆಯಿಂದಲೇ ಕೆಲಸ ಮಾಡಿದ. ಆನ್‌ಲೈನ್‌ನಲ್ಲೇ ಮಾಡುವುದಾದರೆ ನಿನ್ನ ದೇಶದಲ್ಲೇ ಇದ್ದು ಝೂಮ್‌ನಿಂದಲೇ ಕೆಲಸ ಮಾಡು ಅಂದಿದ್ದಾರಂತೆ. ಇಲ್ಲಿಯ ಸಂಬಳವನ್ನು ಅಲ್ಲಿ ನಿರೀಕ್ಷಿಸಬೇಡ, ಕಂಪನಿ ಕಷ್ಟದಲ್ಲಿದೆ ಅಂತ ಹೇಳಿದ್ದಾರಂತೆ. ನಾನು ಕೆಲಸ ಮಾಡುತ್ತಿರುವ ಮ್ಯಾಗಝಿನನ್ನೂ ಮುಂದಿನ ತಿಂಗಳು ಮುಚ್ಚಬೇಕಾದೀತು ಎಂದು ನಮ್ಮ ಪಬ್ಲಿಷರ್ ತಿಳಿಸಿದ್ದಾರೆ. ಫಂಡ್ಸ್ ಇಲ್ಲವಂತೆ. ಹೊಸತಾಗಿ ಕೆಲಸ ಹುಡುಕಲು ಎಲ್ಲೂ ಓಪನಿಂಗ್ ಇಲ್ಲ. ಎಲ್ಲರೂ ಹೈರಿಂಗ್ ಅನ್ನು ಒಂದು ವರ್ಷ ಮುಂದೆ ಹಾಕಿದ್ದಾರೆ.”

ಪ್ರತೀ ವಾರಾಂತ್ಯ ಅಡುಗೆಮನೆಯ ಐಲ್ಯಾಂಡಿನಲ್ಲಿ ಕುಳಿತು ಮನಃಪೂರ್ತಿ ಹರಟುತ್ತಿದ್ದ ಬ್ರಿಯಾನಾಳನ್ನು ನಾನು ನಿಜದಲ್ಲಿ ಕಂಡೇ ಇಲ್ಲ ಅಂತ ಥಟ್ಟನೆ ಅರಿವಾಯಿತು. ಅವಳ ಕಾರ್ನ್‌ರೋ ವಿನ್ಯಾಸದ ಕೂದಲ ಬೇರುಗಳು ಕಪ್ಪಿನಿಂದ ಬೂದು ಬಣ್ಣಕ್ಕೆ ತಿರುಗುತ್ತಿರುವುದನ್ನು ಮೊದಲ ಬಾರಿ ಗಮನಿಸಿದೆ. ಯಾಕೋ ದಣಿದಂತೆ ಕಂಡಳು.

“ಎರಡು ತಿಂಗಳಿಂದ ಮನೆಯ ಸಾಲ ತುಂಬಿಲ್ಲ. ಹೇಗಾದರೂ ಮಾಡಿ ಫಿಕ್ಸ್ ಮಾಡಬಹುದು ಅಂತ ಕಾಯುತ್ತಿದ್ದೆವು. ಇನ್ನೊಂದು ತಿಂಗಳು ಬಿಟ್ಟರೆ ಬ್ಯಾಂಕಿನವರೇ ಹರಾಜು ಹಾಕುತ್ತಾರೆ. ಅದಕ್ಕಿಂತ ಮೊದಲು ನಾವೇ ಮನೆ ಮಾರಬೇಕೆಂದು ನಿಶ್ಚಯಿಸಿದ್ದೇವೆ. ಟೆಡಿ ಪಕ್ಕದ ಟೌನಿನಲ್ಲಿ ಬಾಡಿಗೆ ಮನೆಯನ್ನು ನೋಡಿದ್ದಾನೆ. ಅವನ ಕಾಂಟ್ರಾಕ್ಟು ಮುಗಿಯುವ ತನಕ ಇನ್ನೊಂದು ತಿಂಗಳು ಅಲ್ಲಿದ್ದು ಆನಂತರ ಲಾಗೋಸ್ ನಗರಕ್ಕೇ ವಾಪಸ್ಸಾಗುತ್ತಿದ್ದೇವೆ. ಅಲ್ಲಿನ ಯಬಕನ್ ವ್ಯಾಲಿಯಲ್ಲಿ ಟೆಡಿ ಬೇರೆ ಕೆಲಸಗಳಿಗೆ ಅರ್ಜಿ ಹಾಕಿದ್ದಾನೆ.”

ಆಟವಾಡುತ್ತಿದ್ದ ಟೇಮಿ ಯಾಕೋ ತಲೆಯೆತ್ತಿ ಅವರಮ್ಮನ ಮುಖವನ್ನೊಮ್ಮೆ ನೋಡಿ ಆಟ ಮುಂದುವರೆಸಿದಳು.

